**( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )**

**ದಿಃ 17.10.2025**

ಅಸಲು ದಾವಾ **.ನಂ.221/2022**

ಪಿ.ಡಬ್ಲ್ಯೂ-**1**

ಪಾಟೀ ಸವಾಲು **ಃ** ಶ್ರೀ ಎಂ.ಎನ್.ಆರ್. ವಕೀಲರಿಂದಃ

**1.** ನಾನು ಗೃಹಿಣಿ. ನಾನು ಐಟಿಐ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಈ ದಾವೆನ್ನು ಮೂರು ಆಸ್ತಿಗಳ ಮೇಲೆ ದಾವೆ ಹೂಡಿದ್ದೇನೆ. ದಾವಾ ಐಟಂ ನಂ.**1** ರಿಂದ **3** ರ ಚಕ್ಕುಬಂದಿ ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ನೀಡಿರುವ ಐಟಂ ನಂ.**1** ರಿಂದ **3** ರ ಚಕ್ಕುಬಂದಿಗಳು ದಾವಾ ಸ.ನಂ. ಆಸ್ತಿಗಳ ಚಕ್ಕುಬಂದಿಗಳಲ್ಲ ಎಂದರೆ ಸರಿಯಲ್ಲ. ನಾನು **2** ನೇ ಪ್ರ**2**ವಾದಿಯನ್ನು ನಿರ್ಲಕ್ಷ್ಯ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು **2** ನೇ ಪ್ರತಿವಾದಿಯನ್ನು ನಿರ್ಲಕ್ಷ್ಯ ಮಾಡಿದ್ದು, ನನ್ನ ಮಗಳನ್ನು ಉಪಯೋಗಿಸಿಕೊಂಡು ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

**2. 2** ನೇ ಪ್ರತಿವಾದಿಗೆ ಮಾನಸಿಕ ಕಾಯಿಲೆ ಇದೆ ಎಂದರೆ ಸರಿಯಲ್ಲ. **1** ನೇ ಪ್ರತಿವಾದಿಯ ಅಣ್ಣತಮ್ಮಂದಿರು ದಾವಾ ಆಸ್ತಿಗಳಲ್ಲಿ ವಿಭಾಗವಾಗಿಲ್ಲವೆಂದು **1** ನೇ ಪ್ರತಿವಾದಿಯ ವಿರುದ್ಧ ಅಕರಲಗೂಡಿನ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅ.ದಾ.ಸಂ.**22/2020** ರಂತೆ ದಾವೆ ಹೂಡಿದ್ದಾರೆಂದರೆ ಸರಿಯಲ್ಲ. **1** ನೇ ಪ್ರತಿವಾದಿಗೆ ವಯಸ್ಸಾಗಿದ್ದು ಅವರಿಗೆ ವಯಸ್ಸಾದ ಹೆಂಡತಿ ಇದ್ದಾರೆಂದರೆ ಸರಿ. ನಾನು **1** ನೇ ಪ್ರತಿವಾದಿ ಮತ್ತು ಅವರ ಹೆಂಡತಿಯನ್ನು ನೋಡಿಕೊಳ್ಳಬೇಕೆಂದು ನಿರ್ಲಕ್ಷ್ಯ ಮಾಡಿ ಪ್ರತ್ಯೇಕವಾಗಿ ಇದ್ದೇನೆ ಎಂದರೆ ಸರಿಯಲ್ಲ.

**3.** ನನ್ನ ತಂದೆ ಪೊಲೀಸ್ ಇಲಾಖೆಯಲ್ಲಿದ್ದರೆಂದರೆ ಸರಿ. ದಾವಾ ಆಸ್ತಿಗಳು **1** ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳಾಗಿದ್ದು, **1** ನೇ ಪ್ರತಿವಾದಿಯ ಹಿಸ್ಸೆಗೆ ಬಂದಿಲ್ಲವೆಂದರೆ ಸರಿಯಲ್ಲ. ದಾವಾ ಆಸ್ತಿಗಳು **1** ನೇ ಪ್ರತಿವಾದಿಯ ಸ್ವಯಾರ್ಜಿತ

ಸ್ವತ್ತುಗಳಾದ್ದರಿಂದ ವಾದಿಗೆ ಯಾವುದೇ ಹಕ್ಕು ಇಲ್ಲವೆಂದರೆ ಸರಿಯಲ್ಲ. ದಾವಾ ಆಸ್ತಿಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲವೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ:

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )**

**ಓ.ಹೇ.ಕೇ.ಸ.ಇದೆ.**

1ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**

**ಜೆ.ಎಂ.ಎಫ್.ಸಿ,ಅರಕಲಗೂಡು.**